**<u>ದಿನಾಂಕಃ 11.09.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ಪಾಟೀ ಸವಾಲು: 2 ನೇ ಎದುರುದಾರರ ಪರ ವಕೀಲರಾದ ಶ್ರೀ.KS ರವರಿಂದಃ</u>**

1) ಅಪಘಾತದ ಸಮಯದಲ್ಲಿ ನಾನು ಚಾಲನೆ ಮಾಡುತ್ತಿದ್ದ ದ್ವಿಚಕ್ರ ವಾಹನವು ನನಗೆ ಸೇರಿದ ವಾಹನ ಆಗಿದೆ ಮತ್ತು ಅದರ ಸಂಖ್ಯೆ ಕೆಎ-**06**-ಹೆಚ್‌ಎ -**7888** ಆಗಿದೆ. ದ್ವಿಚಕ್ರ ವಾಹನವನ್ನು ಚಾಲನೆ ಮಾಡಲು ಅನುಮತಿ ನೀಡುವಂತಹ ಚಾಲನಾ ಪರವಾನಗಿಯು ನನ್ನ ಬಳಿ ಇದೆ ಮತ್ತು ಅದನ್ನು ಹಾಜರುಪಡಿಸಿದ್ದೇನೆ.

2) ಅಪಘಾತ ಆದ ಸ್ಥಳದಲ್ಲಿ ರಸ್ತೆಯು ಸುಮಾರು **20** ರಿಂದ **22** ಅಡಿ ಅಗಲ ಇದೆ. ಅಪಘಾತ ಆದಂತಹ ರಸ್ತೆಯಲ್ಲಿ ಬಹಳ ವಾಹನ ಸಂಚಾರ ಇರುತ್ತದೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ನಾನು ನನ್ನ ವಾಹನವನ್ನು ನಿಲ್ಲಿಸಿಕೊಂಡು ನಿಂತಿದ್ದೆನು ಮತ್ತು ಮತ್ತೊಂದು ವಾಹನದ ಚಾಲಕನು ಆಕಡೆಯಿಂದ ಬಂದು ನನ್ನ ವಾಹನಕ್ಕೆ ಡಿಕ್ಕಿ ಹೊಡೆಸಿದನು.

3) ಅಪಘಾತವನ್ನು ಮಾಡಿದ ವಾಹನದ ಚಾಲಕನು ಕುಣಿಗಲ್ ಕಡೆಯಿಂದ ತುಮಕೂರಿನ ಕಡೆಗೆ ಬರುತ್ತಿದ್ದನು. ಫುಟ್ ಪಾತ್ ಮೇಲೆ ನಾನು ನನ್ನ ವಾಹನವನ್ನು ನಿಲ್ಲಿಸಿಕೊಂಡು ನಿಂತಿದ್ದೆನು. ನಾನು ತುಮಕೂರಿನಿಂದ ಕುಣಿಗಲ್ ಕಡೆಗೆ ಹೋಗುವ ರಸ್ತೆಯಲ್ಲಿ ನಿಂತಿದ್ದೆನು. ಪೋಲಿಸರು

ಹಾಜರುಪಡಿಸಿರುವಂತಹ ನಕ್ಷೆಯಲ್ಲಿ ಇರುವ ಮಾಹಿತಿಗಳ ಪ್ರಕಾರ ನಾನು ರಸ್ತೆಯ ವಿರುದ್ಧ ದಿಕ್ಕಿನಲ್ಲಿ ನನ್ನ ವಾಹನವನ್ನು ನಿಲ್ಲಿಸಿಕೊಂಡು ನಿಂತಿದ್ದೆನು ಎಂದರೆ ಸುಳ್ಳು.

4) ನನ್ನ ದ್ವಿಚಕ್ರ ವಾಹನದ ಮುಂಭಾಗವು ಸಂಪೂರ್ಣವಾಗಿ ಜಖಂ ಆಗಿದೆ.

5) ನಾನು ನನ್ನ ವಾಹನದಲ್ಲಿ ಬರುತ್ತಿದ್ದಾಗ ಯಾವುದೇ ಸೂಚನೆಯನ್ನು ಕೊಡದೇ ಏಕಾಏಕಿ ನನ್ನ ವಾಹನವನ್ನು ರಸ್ತೆಯ ಬಲಭಾಗಕ್ಕೆ ತಿರುಗಿಸಿದ್ದೇನೆ ಮತ್ತು ಆ ಕಾರಣದಿಂದ ಅಪಘಾತವು ಆಗಿದೆ ಎಂದರೆ ಸುಳ್ಳು. ಅಪಘಾತದ ಸಮಯದಲ್ಲಿ ನಾನು ಹೆಲ್ಮೆಟ್ ಹಾಕಿಕೊಂಡಿದ್ದೆನು. ಅಪಘಾತದ ನಂತರ ನನ್ನನ್ನು ತುಮಕೂರಿನ ಸಾರ್ವಜನಿಕ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿದೆ. ತುಮಕೂರಿನ ಆಸ್ಪತ್ರೆಯಲ್ಲಿ ವೈದ್ಯರು "ಅಪಘಾತವು ಹೇಗೆ ಆಯಿತು ಎಂದು ನನ್ನನ್ನು ಕೇಳಿದ್ದಾರೆ ಮತ್ತು ನಾನು ಹೇಳಿದ್ದೇನೆ". ಎಂ.ಎಲ್.ಸಿ ರಿಜಿಸ್ಟರ್ ನ ನಕಲನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ.

6) ಅಪಘಾತದ ಸಂಬಂಧವಾಗಿ ನಮ್ಮ ತಂದೆಯು ಪೋಲಿಸರಿಗೆ ದೂರನ್ನು ಕೊಟ್ಟಿದ್ದಾರೆ. ನನ್ನನ್ನು ಆಸ್ಪತ್ರೆಗೆ ಸೇರಿಸಿದ ನಂತರ ನಮ್ಮ ತಂದೆಯು ಪೋಲಿಸರಿಗೆ ದೂರನ್ನು ನೀಡಿದ್ದಾರೆ. ಅಪಘಾತವನ್ನು ನಮ್ಮ ತಂದೆಯು

ನೋಡಿರುವುದಿಲ್ಲ. ನಾನು ಆಸ್ಪತ್ರೆಯಲ್ಲಿ ಇದ್ದಾಗ ಪೋಲಿಸರು ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

7) ಪೋಲಿಸರ ಮುಂದೆ ನಾನು ನೀಡಿದ ಹೇಳಿಕೆಯಲ್ಲಿ ನನ್ನ ವಾಹನದ ಸಂಖ್ಯೆಯನ್ನು ಹೇಳಿದ್ದೇನೆ, ಆದರೆ ಅಪಘಾತವನ್ನು ಮಾಡಿದ ವಾಹನದ ಸಂಖ್ಯೆಯನ್ನು ಹೇಳಿರುವುದಿಲ್ಲ. ನಮ್ಮ ತಂದೆಯು ಪೋಲಿಸರಿಗೆ ನೀಡಿರುವ ದೂರನ್ನು ಮತ್ತು ನಾನು ಪೋಲಿಸರಿಗೆ ನೀಡಿದ ಹೇಳಿಕೆಯ ಧೃಡೀಕೃತ ನಕಲನ್ನು ಹಾಜರು ಮಾಡಲು ನನಗೆ ತೊಂದರೆ ಇರುವುದಿಲ್ಲ.

8) ನಾನು ಹಾಜರುಪಡಿಸಿರುವ ದಾಖಲೆಗಳ ಪ್ರಕಾರವೇ ಅಪಘಾತ ಆದ ಒಂದು ವಾರದ ನಂತರ ಪೋಲಿಸರಿಗೆ ದೂರನ್ನು ಕೊಡಲಾಗಿದೆ ಎಂದರೆ ಸರಿ.

9) ಕೆಎ**-01-**ಹೆಚ್ ಹೆಚ್**-8717** ಸಂಖ್ಯೆಯ ದ್ವಿಚಕ್ರ ವಾಹನವು ಯಾವುದೇ ಅಪಘಾತವನ್ನು ಮಾಡಿರುವುದಿಲ್ಲ ಮತ್ತು ಸದರಿ ವಾಹನದ ಚಾಲಕನ ವಿರುದ್ಧ ಸುಳ್ಳು ಪ್ರಕರಣವನ್ನು ಮಾಡಲಾಗಿದೆ ಎಂದರೆ ಸುಳ್ಳು. ನಾನು ಒಂದು ವಾರದ ಕಾಲ ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ. ಸರ್ಕಾರಿ ಆಸ್ಪತ್ರೆಯಿಂದ ಬಿಡುಗಡೆ ಆದ ನಂತರ ನಾನು ಹೇಮಾವತಿ ಆಸ್ಪತ್ರೆಗೆ ಹೋಗಿ ದಾಖಲು ಆಗಿದ್ದೇನೆ. ತುಮಕೂರಿನ ಸರ್ಕಾರಿ ಆಸ್ಪತ್ರೆಯವರು ನೀಡಿರುವಂತಹ **Discharge Summary** ಹಾಜರುಪಡಿಸಲು

ನನಗೆ ಯಾವುದೇ ತೊಂದರೆ ಇರುವುದಿಲ್ಲ. ಹೇಮಾವತಿ ಆಸ್ಪತ್ರೆಯಲ್ಲಿ ನನಗೆ ಶಸ್ತ್ರ ಚಿಕಿತ್ಸೆಯನ್ನು ಮಾಡಿದ್ದಾರೆ.

10) ಒಟ್ಟು **3** ಬಾರಿ ನಾನು ಹೇಮಾವತಿ ಆಸ್ಪತ್ರೆಗೆ ಹೋಗಿ ಗಾಯಕ್ಕೆ ಡ್ರೆಸಿಂಗ್ ಮಾಡಿಸಿಕೊಂಡು ಬಂದಿದ್ದೇನೆ. ನನಗೆ ಆಗಿದ್ದ ಗಾಯಗಳು ವಾಸಿ ಆಗಿವೆ, ಆದರೆ ಮೂಳೆ ಮುರಿತ ಉಂಟಾಗಿದ್ದ ಕಾರಣದಿಂದ ಇವತ್ತಿಗೂ ಸಹಾ ನನ್ನ ಕಾಲಿನಲ್ಲಿ ನೋವು ಬರುತ್ತದೆ. ನನಗೆ ಇವತ್ತಿಗೂ ಸಹಾ ಕಾಲು ನೋವು ಬರುತ್ತದೆ ಎಂದು ಹೇಳಿರುವ ಸಂಬಂಧ ವೈದ್ಯರು ನೀಡಿರುವ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು.

11) ನಾನು ಹೇಳಿದ ಹಾಗೆ ನನಗೆ ಯಾವುದೇ ದೈಹಿಕ ತೊಂದರೆಗಳು ಉಂಟಾಗಿರುವುದಿಲ್ಲ ಮತ್ತು ಈ ನ್ಯಾಯಾಲಯದ ಮುಂದೆ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

12) ನನ್ನ ಚಿಕಿತ್ಸೆಗಾಗಿ ಮತ್ತು ಓಡಾಟಕ್ಕಾಗಿ **3** ಲಕ್ಷ ರೂಪಾಯಿ ಖರ್ಚಾಗಿದೆ ಎಂದು ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ನನ್ನ ಫಾಲೋಅಪ್ ಚಿಕಿತ್ಸೆಗೆ **50** ಸಾವಿರ ರೂಪಾಯಿಗಳು ಖರ್ಚು ಆಗಿದೆ ಎಂಬುದಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

13) ನಾನು ಎಲೆಕ್ಟ್ರಿಕ್ ಕೆಲಸ ಮಾಡುತ್ತಿದ್ದೆನು ಎಂದು ತೋರಿಸಲು ದಾಖಲೆಗಳನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ.

14) ನಾನು **10** ನೇ ತರಗತಿ ವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. **Electrician** ಉದ್ಯೋಗಕ್ಕೆ ಬೇಕಾಗುವಂತಹ ಯಾವುದೇ ವಿಧ್ಯಾಭ್ಯಾಸವನ್ನು ನಾನು ಮಾಡಿರುವುದಿಲ್ಲ. ನನ್ನ ಉದ್ಯೋಗದ ಬಗ್ಗೆ ಮಾಹಿತಿಯನ್ನು ಪೋಲಿಸರಿಗೆ ನಮ್ಮ ತಂದೆಯು ನೀಡಿದ್ದಾರೆ.

15) ನಮ್ಮ ತಂದೆಯು ನೀಡಿರುವಂತಹ ದೂರಿನಲ್ಲಿ ನಾನು ವ್ಯವಸಾಯ ಮಾಡುತ್ತಿದ್ದೇನೆ ಎಂದು ಹೇಳಲಾಗಿದೆ ಎಂದರೆ ನಾನು ವ್ಯವಸಾಯವನ್ನೂ ಸಹಾ ಮಾಡುತ್ತಿದ್ದೇನೆ. ನಾನು ಈಗ ವ್ಯವಸಾಯ ಮಾಡುತ್ತಿದ್ದೇನೆ ಎಂದರೆ ಸುಳ್ಳು.

16) ನಾನು ಹೇಳಿದ ಹಾಗೆ ನಾನು **Electrician** ಉದ್ಯೋಗ ಮಾಡುತ್ತಿರಲಿಲ್ಲ ಮತ್ತು ನನಗೆ ಯಾವುದೇ ಸಂಪಾದನೆ ಇರಲಿಲ್ಲ ಎಂದರೆ ಸುಳ್ಳು. ನಾನು ಹೇಳಿದ ಹಾಗೆ ನನಗೆ ಯಾವುದೇ ದೈಹಿಕ ತೊಂದರೆಗಳು ಆಗಿರುವುದಿಲ್ಲ ಮತ್ತು ಈ ನ್ಯಾಯಾಲಯದ ಮುಂದೆ ನಾನು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

17) ನನ್ನ ಮುಂದಿನ ಚಿಕಿತ್ಸೆಗಾಗಿ **75** ಸಾವಿರ ರೂಪಾಯಿಗಳು ಬೇಕಾಗುತ್ತದೆ ಎನ್ನುವ ಸಂಬಂಧವಾಗಿ ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಇವತ್ತಿಗೂ ಸಹಾ ದ್ವಿಚಕ್ರ ವಾಹನವನ್ನು ಚಾಲನೆ ಮಾಡುತ್ತಿದ್ದೇನೆ ಎಂದರೆ ಸುಳ್ಳು. ನನ್ನ ಚಾಲನಾ ಪರವಾನಗಿಯನ್ನು ನಾನು **surrender** ಮಾಡಿರುವುದಿಲ್ಲ.

18) ನಾನು ಹೇಳಿದ ಹಾಗೆ ನನಗೆ ಯಾವುದೇ ದೈಹಿಕ ತೊಂದರೆ ಇರುವುದಿಲ್ಲ ಎಂದರೆ ಸುಳ್ಳು.

**<u>ಪಾಟೀ ಸವಾಲು: 1 ನೇ ಎದುರುದಾರರ ಪರವಾಗಿಃ</u>**

1 ನೇ ಎದುರುದಾರರು ಏಕ ಪಕ್ಷೀಯವಾಗಿದ್ದಾರೆ. ಆದ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.